ಔದ್ಯೋಗಿಕ ಖಾತೆಯ ಅಮಲದಾರರಿಗೆ ಮತ್ತು ನೌಕರರಿಗೆ ಸೂಚನೆಗಳು.

ಔದ್ಯೋಗಿಕ ಖಾತೆಯ ಅಮಲದಾರರು ಮತ್ತು ಇತರ ನೌಕರರು, ಗ್ರಾಮ ಸುಧಾರಣೆಯ ಯೋಜನೆಯ ವಿಷಯದಲ್ಲಿ ಸರಕಾರೀ ಅಮಲದಾರರಿಗೆ ಸೂಚನೆಗಳನ್ನು ಕೊಡುವ ಕೈಪಿಡಿಯನ್ನು ಕಾಳಜಿಪೂರ್ವಕವಾಗಿ ಓದಬೇಕು.

ಹೆಚ್ಚಿನ ವಿಶೇಷ ಸೂಚನೆಗಳನ್ನು ಈ ಕೆಳಗೆ ಕೊಟ್ಟಿದೆ ಮತ್ತು ಅವುಗಳನ್ನೆಲ್ಲ ಕಾಳಜಿಪೂರ್ವಕವಾಗಿ ಟಿಪ್ಪಣಿ ಮಾಡಿಕೊಂಡು ಅಮಲಿನಲ್ಲಿ ತರಬೇಕು :—

(೧) ಖಾತೆಯ ಇಲಾಖಾ ಅಮಲದಾರರು, ಅಂದರೆ, ಇಂಡಸ್ಟ್ರಿಯಲ್ ಎಂಜಿನಿಯರ, ಇಂಡಸ್ಟ್ರಿಯಲ್ ಕೆಮಿಸ್ಟ ಮತ್ತು ಫಿಶರೀಸ್ ಆಫಿಸರ ಇವರು, ತಾವು ಪ್ರವಾಸದ ಮೇಲಿದ್ದಾಗ್ಗೆ ಯಾವದೊಂದು ಜಿಲ್ಲೆಗೆ ಭೆಟ್ಟಿ ಕೊಡುವ ಸಂಗತಿಯನ್ನು ಜಿಲ್ಲಾ ಕಾರ್ಯಕಾರೀ ಕಮಿಟಿಯ ಚೆಅರಮನ್ನ ನೆಂಬ ನಾತೆಯಲ್ಲಿ ಸದರಿ ಜಿಲ್ಲೆಯ ಕಲೆಕ್ಟರನಿಗೆ, ಶಕ್ಯವಿದ್ದಷ್ಟು ಮುಂಗಡವಾಗಿ ತಿಳಿಸಬೇಕು ; ಯಾಕಂದರೆ ಅವನು, ಅವರಿಂದ ಬೇಕಾಗಬಹುದಾದ ಸಹಾಯ ಮತ್ತು ಆಲೋಚನೆಗಳನ್ನು ಪಡೆಯುವದಕ್ಕಾಗಿ ಅವರಿಗೆ ಜಿಲ್ಲಾ ಕಾರ್ಯ ಕಾರೀ ಕಮಿಟಿಯ ಸಭೆಯಲ್ಲಿ ಹಾಜರಾಗಲಿಕ್ಕೆ ಆಮಂತ್ರಣ ಕೊಡುವದು ಇಷ್ಟವೆಂದು ತನಗೆ ತೋರಿದರೆ ಹಾಗೆ ಆಮಂತ್ರಣ ಕೊಡಬಹುದು.

(೨) ವೀವ್ಹಿಂಗ (ನೇಯುವ) ಅಸಿಸ್ಟಂಟರು ತಮ್ಮ ಕ್ಷೇತ್ರಗಳಲ್ಲಿಯ ಬೇರೆ ಬೇರೆ ಕಮಿಟಿಗಳ ಕೂಡ ನಿಕಟವಾದ ಸಂಬಂಧವನ್ನಿಡಬೇಕು, ಮತ್ತು ಉಳಿದ ವೇಳೆಯಲ್ಲಿ ಮಾಡತಕ್ಕ ಧಂದೆಯೆಂದು ಕೈನೇಯಿಗೆ, ಕೈನೇಯಿಗೆಯ ಉದ್ಯೋಗದ ಮಾಲನ್ನು ಪೇಟೆಗೆ ಹಚ್ಚೋಣ ಮತ್ತು ಇತರ ಹಳ್ಳಿಯ ಉದ್ಯೋಗಗಳು, ಮುಂತಾದವುಗಳ ಸಂಬಂಧದಿಂದ ಆಲೋಚನೆ ಹೇಳಬೇಕು.

(೩) ಡಾಯಿಂಗ ಡಿಮಾನ್‌ಸ್ಟ್ರೇಟರರು (ಬಣ್ಣ ಹಾಕುವದನ್ನು ತಿಳಿಸಿ ಹೇಳುವವರು) ಎಲ್ಲಿ ನೇಮಿಸಲ್ಪಟ್ಟಿರುವರೋ ಆ ಜಿಲ್ಲೆಯಲ್ಲಿ, ಅವರು ಗ್ರಾಮ ಸುಧಾರಣೆಯ ಸಂಸ್ಥೆಗಳೊಡನೆ ನಿಕಟ ಸಂಬಂಧವನ್ನಿಡಬೇಕು. ಅವರು ಬಣ್ಣ ಹಾಕುವವರಿಗೆ ಮತ್ತು ಅರಿವೆಯ ಮೇಲೆ ಅಚ್ಚು ಹೊಡೆಯುವವರಿಗೆ, ಸುಧಾರಿಸಿದ ಪದ್ಧತಿಗಳ ಬಾಬತುಗಳಲ್ಲಿ ಮಾತ್ರವಲ್ಲದೆ ಕಚ್ಚಾ ಸಾಮಾನು ಗಳನ್ನು ಕೊಳ್ಳುವ ಮತ್ತು ತಯಾರಾದ ಮಾಲನ್ನು ಮಾರಾಟ ಮಾಡುವ ವಿಷಯದಲ್ಲಿಯೂ ಸಹ ಸಹಾಯ ಮಾಡಬೇಕು.

(೪) ಗ್ರಾಮಗಳಲ್ಲಿಯ ವೀವ್ಹಿಂಗ (ನೇಯುವ) ಮಾಸ್ಟರರು ಮತ್ತು ಡಿಮಾನ್‌ಸ್ಟ್ರೇಟರರು (ತಿಳಿಸಿ ಹೇಳುವವರು) ಗ್ರಾಮಸುಧಾರಣೆಯ ಸ್ಥಾನಿಕ ಸಂಸ್ಥೆಗಳೊಡನೆ ಒಂದೇ ಸಮನೆ ವ್ಯವಹಾರ ನಡಿಸುತ್ತಿರಬೇಕು ಮತ್ತು ಅವು ಗಳಿಗೆ ಅವಶ್ಯವಾದ ಸಹಾಯವನ್ನು ಒದಗಿಸಿಕೊಡಬೇಕು. ಸುಧಾರಿಸಿದ ಪದ್ಧತಿಗಳನ್ನು ಮತ್ತು ತಯಾರಿಸುವ ರೀತಿಗಳನ್ನು ಕಲಿಸುವದು ಮಾತ್ರ ತಮ್ಮ ಕರ್ತವ್ಯವೆಂದು ತಿಳಿಯದೆ, ಅವರು ಇತರ ಮಾರ್ಗಗಳಲ್ಲಿ ಸಹ, ವಿಶೇಷವಾಗಿ, ಕಚ್ಚಾ ಪದಾರ್ಥಗಳನ್ನು ಕೊಳ್ಳುವ ಮತ್ತು ಅರಿವೆಯನ್ನು ಮಾರಾಟ ಮಾಡುವ ಮುಂತಾದ ಬಾಬತುಗಳಲ್ಲಿ, ಸಹಾಯ ಮಾಡಬೇಕು.

(ಙ) ಔದ್ಯೋಗಿಕ ಖಾತೆಯ ಅಧಿಕಾರದೊಳಗಿನ ಶಾಸ್ತ್ರೀಯ ವಿಷಯದ ಮತ್ತು ಔದ್ಯೋಗಿಕ ವಿಷಯದ ಶಾಲೆಗಳ ನೌಕರರು ಸಹ ತಮ್ಮ ಕ್ಷೇತ್ರ ಗಳಲ್ಲಿಯ ಗ್ರಾಮಸುಧಾರಣೆಯ ಕವಿಯಿಟಿಗಳ ಸಂಗಡ ವ್ಯವಹಾರವನ್ನು ನಡಿಸುತ್ತಿರಬೇಕು ಮತ್ತು ಅವಶ್ಯವಿರಬಹುದಾದ ಸಹಾಯವನ್ನು ಮತ್ತು ಆಲೋಚನೆಯನ್ನು ಕೊಡಬೇಕು.

(ಚ) ನೇಯುವ ಮತ್ತು ಬಣ್ಣ ಹಾಕುವ ಶಾಲೆಗಳ, ಮತ್ತು ಡಿಮಾನ್ ಸ್ಟ್ರೇಶನ್ಸ (ತಿಳಿಸಿ ಹೇಳುವ) ಖಾತೆಯ ಮತ್ತು ಶಾಸ್ತ್ರೀಯ ವಿಷಯದ ಮತ್ತು ಔದ್ಯೋಗಿಕ ವಿಷಯದ ಶಾಲೆಗಳ ಯಾವತ್ತು ನೌಕರರು ಸುಧಾರಿಸಿದ ಗ್ರಾಮಕ್ಕೆ ಯೋಗ್ಯವಾಗುವ ರೀತಿಯಿಂದ ವರ್ತನವನ್ನಿಟ್ಟು ಮತ್ತು ವಿಲ್ಲ ಕೆಲಸವನ್ನು ಮಾಡಿ ಒಳಿತಾದ ಉದಾಹರಣೆಯನ್ನು ಹಾಕಿಕೊಡುವ ಪ್ರಯತ್ನ ಮಾಡಬೇಕು.